ಪಿ.ಡಬ್ಲ್ಯೂ. 1

**ದಿನಾಂಕಃ 08.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ಮತ್ತು 2 ನೇ ಎದುರುದಾರರ ಪರ ಶ್ರೀ ಬಿ. ಆರ್.ಡಿ. ವಕೀಲರಿಂದ**

ನನ್ನ ತಂದೆ ಸಹಿ ಮಾಡುತ್ತಿರಲಿಲ್ಲ, ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು. ದಿನಾಂಕ 04.02.2016 ರಂದು ನಮ್ಮ ಜಮೀನಿನಲ್ಲಿ ಎದುರುದಾರರಿಗೆ ಹೈ ಟೆನ್ಷನ್ ಟವರ್ ಗೋಸ್ಕರ ನನ್ನ ತಂದೆ ಒಂದು ಮನವಿ ಪತ್ರವನ್ನು ನೀಡಿದ್ದರು ಮತ್ತು ಅದಕ್ಕೆ ತನ್ನ ಹೆಬ್ಬೆಟ್ಟಿನ ಗುರುತು ಸಹ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಿನದಂದೆ ಎದುರುದಾರರು ನನ್ನ ತಂದೆಗೆ ಒಂದು ನೋಟೀಸನ್ನು ಸಹ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ನೋಟಿಸಿಗೆ ನನ್ನ ತಂದೆ ಹೆಬ್ಬೆಟ್ಟಿನ ಗುರುತು ಸಹ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಸರ್ವೆ ನಂಬರ್ 523 ಆಗಿದೆ. ಸದರಿ ನಮ್ಮ ಜಮೀನು 2 ಎಕರೆ 33 ಗುಂಟೆ ಆಗಿದೆ. ದಿನಾಂಕ 4.02.2016 ರಂದು ಎದುರುದಾರರು, ಗ್ರಾಮಲೆಕ್ಕಾಧಿಕಾರಿ ಹಾಗೂ ಗ್ರಾಮಸ್ಥರ ಸಮಕ್ಷಮದಲ್ಲಿ ಸ್ಥಳ ಪಂಚನಾಮೆ ಮಾಡಿಸಿ ಸದರಿ ಪಂಚನಾಮೆಗೆ ನನ್ನ ತಂದೆ ತನ್ನ ಹೆಬ್ಬೆಟ್ಟಿನ ಗುರುತನ್ನು ಸಹ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಎದುರುದಾರರು ನಮ್ಮ ಜಮೀನಿನಲ್ಲಿ ಗೋಪುರ ಕಟ್ಟಿದ್ದಾರೆ ಎನ್ನುವ ಕಾರಣಕ್ಕಾಗಿ ಡಿ.ಡಿ ಸಂಖ್ಯೆ 901601 ದಿನಾಂಕ 06.04.2016 ರಂದು ರೂ.2,25,000/ ರೂಪಾಯಿ ಹಣವನ್ನು ನೀಡಿದ್ದಾರೆ, ಸದರಿ ಹಣವನ್ನು ನನ್ನ ತಂದೆ ಸ್ವೀಕರಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ನಮ್ಮ ಜಮೀನಿನಲ್ಲಿ ನಾವು

ತೊಗರಿ ಮತ್ತು ರಾಗಿ ಬೆಳೆಗಳನ್ನು ಬೆಳೆಯುತ್ತಿದ್ದೆವು. ಸದರಿ ಎರಡೂ ಬೆಳೆಗಳನ್ನು ಹೊರತು ಪಡಿಸಿ ನಾವು ಬೇರೆ ಯಾವುದೇ ಬೆಳೆಗಳನ್ನು ಬೆಳೆಯುತ್ತಿರಲಿಲ್ಲ ಎಂದರೆ ಸರಿ. ಸದರಿ ಗೋಪುರ ನಿರ್ಮಾಣ ಮಾಡುವ ಸಮಯದಲ್ಲಿ ಇದ್ದ ಬೆಳೆ ಹಾನಿಗೊಳಗಾಗಿದೆ ಎಂದು ಹೇಳಿ ರೂ.69,031/ ಹಣವನ್ನು ಪರಿಹಾರವಾಗಿ ನನ್ನ ತಂದೆ ಪಡೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ಪರಿಹಾರದ ಮೊತ್ತವನ್ನು ಪಡೆದುಕೊಂಡಿದ್ದಕ್ಕೆ ನನ್ನ ತಂದೆ ಎದುರುದಾರರಿಗೆ ನಷ್ಟ ಪೂರೈಕೆ ಪ್ರಮಾಣ ಪತ್ರವನ್ನು ಸಹಾ ಬರೆದು ನೀಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಂದೆ ತನ್ನ ಜೀತಾವಧಿಯಲ್ಲಿ ಅರ್ಜಿ ಸಲ್ಲಿಸಿದಾಗ ಸದರಿ ಅರ್ಜಿಯಲ್ಲಿ ಏನು ವಿಷಯ ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಎಷ್ಟು ಜಮೀನಿನಲ್ಲಿ ಗೋಪುರ ಕಟ್ಟಲಾಗಿದೆ, ಎಷ್ಟು ಬೆಳೆ ಹಾನಿಗೊಳಪಟ್ಟಿದೆ, ಎಷ್ಟು ಗಿಡಮರಗಳು ಇದ್ದವು ಎನ್ನುವ ಬಗ್ಗೆ ನನಗೆ ಹೇಳಲು ಬರುತ್ತದೆ. ದಿನಾಂಕಃ2.12.2016 ರಂದು ಆದ ಜಿಲ್ಲಾಧಿಕಾರಿಯವರ ಆದೇಶದ ಪ್ರಕಾರ ನಮ್ಮ ಜಮೀನು ಮತ್ತು ಬೆಳೆಗಳಿಗೆ ಆದ ನಷ್ಟ ಪರಿಹಾರದ ಮೊತ್ತವನ್ನು ಎದುರುದಾರರು ನಮಗೆ ಪಾವತಿ ಮಾಡಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಡಿಮೆ ಪಾವತಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಸಲ್ಲಿಸಿದ ಅರ್ಜಿಯಲ್ಲಿ ಸದರಿ ಸಮಯದಲ್ಲಿ ನಮ್ಮ ಜಮೀನಿನಲ್ಲಿ ಎಷ್ಟು ಬೇವಿನ ಮರ, ತೆಂಗಿನ ಮರ, ಪೇರು ಮರಗಳು ಇದ್ದವು ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಎದುರುದಾರರಿಂದ ಹೆಚ್ಚಿನ ಪರಿಹಾರ ಮೊತ್ತ ಪಡೆಯುವ

ಸಲುವಾಗಿ ನ್ಯಾಯಾಲಯಕ್ಕೆ ನಾವು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು